RNU AIR DHARWAD

AUGUST 27, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, ಗೌರಿ ಹಾಗೂ ಗಣೇಶೋತ್ಸವದ ಹಾರ್ದಿಕ ಶುಭಾಶಯಗಳು**

<><><>

**ಮುಖ್ಯಾಂಶಗಳು**

- **ನಾಡಿನಾದ್ಯಂತ ಇಂದು, ಗೌರಿ–ಗಣೇಶ ಹಬ್ಬದ** ಸಂಭ್ರಮ; ಗಣ್ಯರ ಶುಭಾಶಯ.
- **ಧಾರವಾಡ ಜಿಲ್ಲೆಯ, 100** ಸರ್ಕಾರಿ ಶಾಲೆ ಕಟ್ಟಡಗಳ, ಪುನರ್ ನಿರ್ಮಾಣಕ್ಕೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಕ್ರಮ.
- **ವಿಜಯಪುರ ಜಿಲ್ಲೆ, ಇಂಡಿಯ,** ಸ್ವದೇಶಿ ತಳಿ ನಿಂಬೆಗೆ, ಭೌಗೋಳಿಕ ಸೂಚ್ಯಂಕ,  ಮಾನ್ಯತೆ.
- **ಕಟಗೇರಿ ದಾಸರು** ಎಂದೇ ಪ್ರಸಿದ್ಧರಾಗಿದ್ದ, ಪಂಡಿತ ಅನಂತಾಚಾರ್ಯ ಕಟಗೇರಿ, ವಿಜಯಪುರದಲ್ಲಿ, ನಿಧನ.

<><><>

**ನಾಡಿನಾದ್ಯಂತ ಸ್ವರ್ಣ ಗೌರಿ** ಪೂಜೆ ಹಾಗೂ ವ್ರತವನ್ನು, ಶ್ರದ್ಧಾ, ಭಕ್ತಿಯಿಂದ ಆಚರಿಸಿ, ಇಂದು ಗಣೇಶ ವಿಗ್ರಹ ಪ್ರತಿಷ್ಠಾಪನೆಗೆ, ಭರದ ಸಿದ್ಧತೆಗಳನ್ನು, ಜಿಟಿ ಜಿಟಿ ಮಳೆಯಲ್ಲೇ ಕೈಗೊಳ್ಳಲಾಗಿದೆ. ಇಂದು ಗಣೇಶ ವಿಗ್ರಹಗಳು ಮನೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ, ಪ್ರಾಣ ಪ್ರತಿಷ್ಠಾಪನೆಗೊಳ್ಳಲಿವೆ.

<><><>

**'ಮಣ್ಣಿನಿಂದ ತಯಾರಿಸಿದ, ಪರಿಸರ ಸ್ನೇಹಿ** ಗಣೇಶ ವಿಗ್ರಹಗಳನ್ನು ಮಾತ್ರ ಪೂಜಿಸುವಂತೆ, ಹಸಿರು ಪಟಾಕಿಗಳನ್ನು ಮಾತ್ರ ಬಳಸಿ, ಹಬ್ಬವನ್ನು ಸಂಭ್ರಮ–ಸಡಗರದಿಂದ, ಪರಿಸರ ಕಾಳಜಿಯೊಂದಿಗೆ ಆಚರಿಸೋಣ' ಎಂದು, ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿದಂತೆ, ಅನೇಕ ಗಣ್ಯರು ಮನವಿ ಮಾಡಿ, ಹಬ್ಬದ ಶುಭಾಶಯ ಕೋರಿದ್ದಾರೆ.

<><><>

**ಕೊಡಗು ಜಿಲ್ಲೆಯ, ವಿವಿಧ ಶಾಲೆಗಳಲ್ಲಿ** ಇಕೋ ಕ್ಲಬ್ ಹಾಗೂ ಕಾಲೇಜುಗಳಲ್ಲಿ ಎನ್.ಎಸ್.ಎಸ್. ವತಿಯಿಂದ, 'ನಮ್ಮ ನಡೆ ಹಸಿರಿನೆಡೆಗೆ; ಗ್ರೋ ಗ್ರೀನ್' ಅಭಿಯಾನದಡಿ, ಗೌರಿ–ಗಣೇಶೋತ್ಸವ ಹಬ್ಬದಾಚರಣೆ, ಪರಿಸರ ಸ್ನೇಹಿಯಾಗಿರಲಿ ಎಂದು, ಟಿ.ಜಿ. ಪ್ರೇಮ್‌ಕುಮಾರ ನೇತೃತ್ವದಲ್ಲಿ, ಪ್ರಾತ್ಯಕ್ಷಿಕೆ ನಡೆಯಿತು.

<><><>

**ಗೌರಿ–ಗಣೇಶ ಹಬ್ಬದ ಹಿನ್ನೆಲೆ,** ಚಿಕ್ಕಮಗಳೂರು ಜಿಲ್ಲೆ, ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ ದೇವಾಲಯ ಹಾಗೂ ನಾರುಕಂತೆ ಮಠಕ್ಕೆ, ಸುತ್ತಲಿನ 40ಕ್ಕೂ ಹೆಚ್ಚು ಗ್ರಾಮಗಳ ಭಕ್ತರು ಭೇಟಿ ನೀಡಲಿರುವ ಹಿನ್ನೆಲೆ, ಪ್ರವಾಸಿ ತಾಣಗಳಿಗೆ ಇಂದು ಪ್ರವಾಸಿಗರ ಭೇಟಿಯನ್ನು ನಿರ್ಬಂಧಿಸಿ, ಜಿಲ್ಲಾಧಿಕಾರಿ ಮೀನಾ ನಾಗರಾಜ ಆದೇಶಿಸಿದ್ದಾರೆ.

<><><>

<><><>

**ಕಳೆದ 35 ವರ್ಷಗಳಿಂದ** ಪರಿಸರ ಸ್ನೇಹಿ ಮಣ್ಣಿನ ಗಣೇಶ ವಿಗ್ರಹ ತಯಾರಿಸುತ್ತ, ವಿಶೇಷ ಪ್ರಯೋಗಗಳಿಗೆ ಮಾದರಿಯಾಗಿದ್ದಾರೆ, ಧಾರವಾಡದ ಕಲಾವಿದರಾದ, ಶ್ರೀಮತಿ ನಿರ್ಮಲಾ ಹಾಗೂ ಮಂಜುನಾಥ ಹಿರೇಮಠ ದಂಪತಿ. ಪ್ರದೇಶ ಸಮಾಚಾರಕ್ಕಾಗಿ, ಮಂಜುನಾಥ ಹಿರೇಮಠ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಕೃಷ್ಣ ನದಿ ಮೇಲ್ದಂಡೆ ಯೋಜನೆ 3ನೇ ಹಂತದ** ಭೂ ಸ್ವಾಧೀನ, ಪುನರ್ ವಸತಿ, ಪುನರ್ ನಿರ್ಮಾಣ ಹಾಗೂ ಹೆಚ್ಚುವರಿ ಭೂ ಪರಿಹಾರ ಕೋರಿ, ವಿವಿಧ ನ್ಯಾಯಾಲಯಗಳಲ್ಲಿ ಸಲ್ಲಿಕೆಯಾಗಿರುವ, ಪ್ರಕರಣಗಳ ಕುರಿತು, ಬೆಂಗಳೂರಿನಲ್ಲಿ ಮಹತ್ವದ ಸಭೆ ನಡೆಯಿತು. ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿದ್ದಾರೆ. ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ.ಶಿವಕುಮಾರ, ಕಾನೂನು ಖಾತೆ ಸಚಿವ ಎಚ್.ಕೆ.ಪಾಟೀಲ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಸಭೆಯಲ್ಲಿ ಪಾಲ್ಗೊಂಡಿದ್ದರು.

<><><>

**ಧಾರವಾಡ ಜಿಲ್ಲೆಯಲ್ಲಿ,** 330ಕ್ಕೂ ಅಧಿಕ ಸರ್ಕಾರಿ ಶಾಲೆ ಕಟ್ಟಡಗಳು, ಮಳೆಯಿಂದ ಹಾನಿಗೀಡಾಗಿದ್ದು, ಖಾಸಗಿ ಸಹಭಾಗಿತ್ವದಲ್ಲಿ, ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಯೋಜನೆ ಅಡಿ, ಆ ಪೈಕಿ 100 ಕಟ್ಟಡಗಳ ಪುನರ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವುದಾಗಿ, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯ ತಮ್ಮ ಕಚೇರಿಯಲ್ಲಿ, ಜಿಲ್ಲಾಧಿಕಾರಿ ಹಾಗೂ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು. ಕೇಂದ್ರ ವಿಪತ್ತು ನಿರ್ವಹಣಾ ನಿಧಿ ಹಾಗೂ ರಾಜ್ಯ ವಿಪತ್ತು ಪರಿಹಾರ ನಿಧಿ ಯೋಜನೆ ಅಡಿ, ಸಮೀಕ್ಷೆ ಬಳಿಕ, ಶೀಘ್ರ ಪರಿಹಾರ ಒದಗಿಸುವಂತೆ, ಸಚಿವರು ಸೂಚಿಸಿದರು.

<><><>

**ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತ ವಲಯಗಳು**, ಬ್ಲಾಕ್ ಸ್ಪಾಟ್ಸ್ ಗುರುತಿಸಿ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯಿಂದ ವರದಿ ಸಲ್ಲಿಸಲು, ಹಾಗೂ ಹುಬ್ಬಳ್ಳಿ–ಧಾರವಾಡ ಮಧ್ಯದ, ಬೈಪಾಸ್ ಹೆದ್ದಾರಿ ಕಾಮಗಾರಿಯ ವೇಗ ವರ್ಧಿಸಲು, ಸಚಿವರು ನಿರ್ದೇಶನ ನೀಡಿದರು.

<><><>

**ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ** ನಾಗಣ್ಣ ಗೌಡ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿಯ, ಕೋಟೆ ಬೀದಿಯ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಗೆ ಭೇಟಿ ನೀಡಿ, ಪರಿಶೀಲಿಸಿದರು. ಕಿಟಕಿಯ ಸಜ್ಜಾ ಕುಸಿದು, ಮೂವರು ವಿದ್ಯಾರ್ಥಿಗಳು ಗಾಯಗೊಂಡ ಪ್ರಕರಣದ ಹಿನ್ನೆಲೆ, ಶಾಲೆಯ ಕಟ್ಟಡದ ಸುಸ್ಥಿತಿ ವರದಿ ನೀಡುವಂತೆ, ಸೂಚಿಸಿದ್ದಾಗಿ ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ, ಆಸ್ಪತ್ರೆಗೆ ಭೇಟಿ ನೀಡಿ, ಮಕ್ಕಳ ಆರೋಗ್ಯ ವಿಚಾರಿಸಿ, ಸೂಕ್ತ ಚಿಕಿತ್ಸೆ ನೀಡುವಂತೆ, ವೈದ್ಯರಿಗೆ ನಿರ್ದೇಶಿಸಿದರು.

<><><>

**ವಿಜಯಪುರ ಜಿಲ್ಲೆ, ಇಂಡಿಯ ಸ್ವದೇಶಿ ತಳಿ** ನಿಂಬೆಗೆ, ಭೌಗೋಳಿಕ ಸೂಚ್ಯಂಕ, ಗ್ಲೋಬಲ್ ಐಡೆಂಟಿಫಿಕೇಶನ್ ಟ್ಯಾಗ್ ಮಾನ್ಯತೆ ದೊರೆತಿದೆ. 'ಅಂತಾರಾಷ್ಟ್ರೀಯ ಮಾರಕಟ್ಟೆ ಪ್ರವೇಶಿಸಲು, ಇಂಡಿ ಲೆಮನ್ ಸಜ್ಜಾಗಿದ್ದು, ನಮ್ಮ ರೈತರ ಆದಾಯವನ್ನು ಹೆಚ್ಚಿಸುವುದಷ್ಟೇ ಅಲ್ಲದೇ, ರಫ್ತು ಉದ್ಯಮಕ್ಕೆ, ಹೊಸ ಬಾಗಿಲು ತೆರೆದಿದೆ' ಎಂದು, ಕೇಂದ್ರ ನಾಗರಿಕ ಪೂರೈಕೆ ಹಾಗೂ ಆಹಾರ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಈ ಮೈಲಿಗಲ್ಲು, ಭಾರತದ ಜಿ.ಐ. ಮಾನ್ಯತೆ ಪಡೆದ, ಕೃಷಿ ಪರಂಪರೆಯ ವೈಭವವನ್ನು ಪ್ರತಿಬಿಂಬಿಸಿ, ಜಾಗತಿಕ ವೇದಿಕೆಯಲ್ಲಿ, ದೇಶಿ ಉತ್ಪನ್ನಗಳ ಸಾಮರ್ಥ್ಯ ತೋರಿಸುತ್ತಿದೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಅಭಿನಂದಿಸಿದ್ದಾರೆ.

<><><>

**ದೇಸಿ ತಳಿಯಾದ, 'ಕಾಗ್ಜಿ ನಿಂಬೆ ಕೃಷಿ'ಯಲ್ಲಿ** ಗಣನೀಯ ಸಾಧನೆ ಮಾಡಿದ, ಆತ್ಮ ಯೋಜನೆ ಫಲಾನುಭವಿ ಹಾಗೂ ರಾಜ್ಯ ಸಲಹಾ ಸಮಿತಿ ಸಲಹೆಗಾರ, ವಿಜಯಪುರ ಜಿಲ್ಲೆ, ಇಂಡಿ ತಾಲೂಕು, ತಾಂಬಾ ಗ್ರಾಮದ ಬೀರಪ್ಪ ಚಿನ್ನಪ್ಪ ಒಗ್ಗಿ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಕಟಗೇರಿ ದಾಸರು** ಎಂದೇ ಪ್ರಸಿದ್ಧರಾಗಿದ್ದ, ಪಂಡಿತ ಅನಂತ ಆಚಾರ್ಯ ಬಾಳಾಚಾರ್ಯ ಕಟಗೇರಿ ದಾಸರು, ವಿಜಯಪುರದ ತಮ್ಮ ಅಣ್ಣನ ಮನೆಯಲ್ಲಿ, ಅಲ್ಪಕಾಲಿಕ ಅಸೌಖ್ಯದಿಂದ ಬಳಲಿ, ನಿನ್ನೆ ಸಂಜೆ ನಿಧನರಾದರು. ಅವರಿಗೆ 96 ವರ್ಷ ವಯಸ್ಸಾಗಿತ್ತು. ದಾಸ ಸಾಹಿತ್ಯ ಹಾಗೂ ಸಂಗೀತದ ಹೆಸರಾಂತ ಗಾಯಕ–ಪರಿಚಾರಕರಾಗಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ, ಅನೇಕ ಪುರಸ್ಕಾರಗಳಿಗೆ ಭಾಜನರಾಗಿದ್ದ, ಕಟಗೇರಿ ದಾಸರು, ಧಾರವಾಡದಲ್ಲಿ, ನೂರಾರು ವಿದ್ಯಾರ್ಥಿಗಳ ಮನೆ ಮನೆಗೆ ತೆರಳಿ, ದಾಸರ ಪದಗಳನ್ನು ಕಲಿಸಿದ ವಿದ್ವಾಂಸರು. ಪಾರ್ಥಿವ ಶರೀರದ ಅಂತ್ಯಕ್ರಿಯೆ, ನಿನ್ನೆ ರಾತ್ರಿ ವಿಜಯಪುರದಲ್ಲಿ ಜರುಗಿತು ಎಂದು, ಕುಟುಂಬ ವರ್ಗ ತಿಳಿಸಿದೆ.

<><><>

**ದಾಸರ ಶಿಷ್ಯೆ, ವಿದುಷಿ ಸಂಗೀತಾ ಕಟ್ಟಿ ಕುಲಕರ್ಣಿ** ಸೇರಿದಂತೆ, ಸಂಗೀತ ಲೋಕದ ಗಣ್ಯರು, ಕಟಗೇರಿ ದಾಸರ ನಿಧನಕ್ಕೆ, ಕಂಬನಿ ಮಿಡಿದಿದ್ದಾರೆ.

<><><>

**'ಪ್ರತಿ ಒಂದು ಗೋಲಿಗೆ, ಒಂದು ಸಸಿ'** ನೆಡುವ ಮಾದರಿನಡೆಯೊಂದಿಗೆ, 2026ರ ಏಪ್ರಿಲ್‌ನಲ್ಲಿ, ಚೇನಂಡ ಕುಟುಂಬದ ಸಾರಥ್ಯದಲ್ಲಿ, 26ನೇ ಕೊಡವ ಕೌಟುಂಬಿಕ ಹಾಕಿ ಉತ್ಸವ, ನಾಪೋಕ್ಲುವಿನಲ್ಲಿ ನಡೆಯಲಿದೆ. ಚೇನಂಡ ಹಾಕಿ ಉತ್ಸವದ ಕಾರ್ಯದರ್ಶಿ ಚೇನಂಡ ಮಧು ಮಾದಯ್ಯ, ಮಡಿಕೇರಿಯಲ್ಲಿ ಈ ವಿಷಯ ತಿಳಿಸಿದರು. ಹಾಕಿ ಉತ್ಸವದ ಹಿನ್ನೆಲೆಯಲ್ಲಿ, ಮುಂದಿನ 15 ದಿನಗಳಲ್ಲಿ, ಕೊಡಗಿನಾದ್ಯಂತ, ಎರಡೂವರೆ ಸಾವಿರ ಸಸಿಗಳನ್ನು ಚೇನಂಡ ಕುಟುಂಬ ನೆಡಲಿದೆ ಎಂದರು.

<><><>

**ಉಪ ಲೋಕಾಯುಕ್ತ, ನ್ಯಾಯಮೂರ್ತಿ, ಬಿ.ವೀರಪ್ಪ,**ನಾಳೆಯಿಂದ, ಮೂರು ದಿನಗಳ ಕಾಲ ರಾಯಚೂರಿಗೆ ಭೇಟಿ ನೀಡಿ, ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು, ರಾಯಚೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸತೀಶ ಚಿಟಗುಬ್ಬಿ, ತಿಳಿಸಿದ್ದಾರೆ. ಲೋಕಾಯುಕ್ತರ ಭೇಟಿ, ಅಹವಾಲು ಆಲಿಕೆ ಹಾಗೂ ದೂರುಗಳ ವಿಚಾರಣೆ ಹಿನ್ನೆಲೆ, ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ರಜತ ಮಹೋತ್ಸವ ಸಭಾಂಗಣದಲ್ಲಿ, ಪೂರ್ವಭಾವಿ ಸಭೆ ನಡೆಯಿತು.

<><><>

**ರಾಜ್ಯದ ವಿವಿಧೆಡೆ,** ಮಳೆ ಪುನಃಶ್ಚೇತನಗೊಂಡಿದೆ. ಆಗಸ್ಟ್ 30ರ ವರೆಗೆ, ರಾಜ್ಯದ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ, ಭಾರೀ ಮಳೆಯಾಗುವ ನಿರೀಕ್ಷೆ ಇದೆ. ಒಳನಾಡು ಜಿಲ್ಲೆಗಳಲ್ಲಿ, ಆಗಸ್ಟ್ 28ರ ವರೆಗೆ, ಗುಡುಗು, ಮಿಂಚು ಹಾಗೂ ಜೋರಾದ ಗಾಳಿಯೊಂದಿಗೆ, ಚದುರಿದಂತೆ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿದೆ.

<><><>

- **ನಾಡಿನಾದ್ಯಂತ ಇಂದು, ಗೌರಿ–ಗಣೇಶ ಹಬ್ಬದ** ಸಂಭ್ರಮ; ಗಣ್ಯರ ಶುಭಾಶಯ.
- **ಧಾರವಾಡ ಜಿಲ್ಲೆಯ, 100** ಸರ್ಕಾರಿ ಶಾಲೆ ಕಟ್ಟಡಗಳ, ಪುನರ್ ನಿರ್ಮಾಣಕ್ಕೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಕ್ರಮ..
- **ವಿಜಯಪುರ ಜಿಲ್ಲೆ, ಇಂಡಿಯ,** ಸ್ವದೇಶಿ ತಳಿ ನಿಂಬೆಗೆ, ಭೌಗೋಳಿಕ ಸೂಚ್ಯಂಕ, ಮಾನ್ಯತೆ.
- **ಕಟಗೇರಿ ದಾಸರು** ಎಂದೇ ಪ್ರಸಿದ್ಧರಾಗಿದ್ದ, ಪಂಡಿತ ಅನಂತಾಚಾರ್ಯ ಕಟಗೇರಿ, ವಿಜಯಪುರದಲ್ಲಿ, ನಿಧನ.

<><><>